**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 20115/2013**

| | |
|---|---|
| **ಸಾಕ್ಷಿದಾರರ ಹೆಸರು** | **ಅಮಿತ್ ಅಗರವಾಲ್** |
| **ತಂದೆಯ ಹೆಸರು** | **ಓಂ ಪ್ರಕಾಶ ಅಗರವಾಲ್** |
| **ವಯಸ್ಸು** | **44 ವರ್ಷ** |
| **ಉದ್ಯೋಗ** | **ಸೇಲ್ಸ ಮಾರ್ಕೇಟಿಂಗ್** |
| **ವಾಸ** | **ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.** |
| **ಪ್ರಮಾಣೀಕರಿಸಿದ ದಿನಾಂಕ** | **05/06/2023** |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2007 ರಿಂದ 2018 ರವರೆಗೆ ಮುಕುಂದ ಸ್ಟೀಲ್ ಕಂಪನಿಯಲ್ಲಿ ಬ್ರಾಂಚ್ ಇನಚಾರ್ಜ ಆಗಿ ಸೇವೆ ಸಲ್ಲಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯವಿದೆ. ನಮ್ಮ ಕಂಪನಿಯಿಂದ ಪ್ರತಿ ತಿಂಗಳು ಪರ್ಚೇಜಿಂಗ್ ಆರ್ಡರ ಮಾಡುತ್ತಿದ್ದರು. ಆರೋಪಿಯ ಆದೇಶದಂತೆ ಆತನಿಗೆ ಅಗತ್ಯವಿರುವ ವಸ್ತುಗಳನ್ನು ಸಿದ್ದಪಡಿಸಿ ಇನವೈಸ್ ತಯಾರಿಸಿ ಆರೋಪಿಗೆ ತಿಳಿಸಿರುತ್ತೇನೆ. ಆರೋಪಿ ಸದರಿ ವಸ್ತುಗಳನ್ನು ತೆಗೆದುಕೊಂಡು ಹೋಗಲು ವಾಹವನ್ನು ಕಳುಹಿಸಿದ್ದರು. ಸದರಿ ಇನವೈಸ್ ನಂಬರ್ ಗಳನ್ನು ಹೇಳಲು ಆಗುವುದಿಲ್ಲ. ಆದರೆ ಸದರಿ ಇನವೈಸ್ ಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈಗಾಗಲೇ ಆರೋಪಿ ಪರ ವಕೀಲರ ತಕರಾರಿಗೆ ಒಳಪಡಿಸಿ ಗುರುತಿಸಲಾಗಿರುವ ನಿಪಿ-17 ರಿಂದ 28 ದಾಖಲೆಗಳನ್ನು ಸಾಕ್ಷಿದಾರನಿಗೆ ತೋರಿಸಿ ಪ್ರಶ್ನಿಸಲಾಗಿ, ಸದರಿ ಇನವೈಸ್ ಗಳು ಮುಕುಂದ ಕಂಪನಿಯಿಂದ ನೀಡಲಾಗಿರುವ ಇನವೈಸ್ ಗಳಾಗಿರುತ್ತವೆ ಎಂದು

ಹೇಳುತ್ತಾರೆ. ಸದರಿ ಇನವೈಸ್ ಗಳನ್ನು 2011-2012 ನೇ ಸಾಲಿನಲ್ಲಿ ನೀಡಲಾಗಿರುತ್ತದೆ.

**ಪಾಟೀ ಸವಾಲು : ಶ್ರೀ. ಆರ್. ಎಮ್. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**